ಬಹುಮಾನವನ್ನು ನಮಗೆ ಕೊಟ್ಟಿದ್ದಾರೆ. ಈಗ ಅವರು ತರಬೇತಿಯಲ್ಲಿಯೂ ಕೂಡ ಇದ್ದಾರೆ. ಉಳಿದ 4,555 ಹುದ್ದೆಗಳನ್ನು ಭರ್ತಿ ಮಾಡಲು ಈಗ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿದ ಉತ್ತರಗಳು :-

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗೃಹ ಮತ್ತು ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ : 17-07-2007 ರಂದು 7 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 153 ಪ್ರಶ್ನೆಗಳ ಪೈಕಿ 130 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಈಗ ವರದಿಯನ್ನೊಪ್ಪಿಸುವುದು.

2 ವರದಿಯನ್ನೊಪ್ಪಿಸುವುದು

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಅಧ್ಯಕ್ಷರು, ಅಂದಾಜುಗಳ ಸಮಿತಿ) :- ಸನ್ಮಾನ್ಯ ಅಧ್ಯಕ್ಷರೇ, 2006-07 ನೇ ಸಾಲಿನ ಅಂದಾಜುಗಳ ಸಮಿತಿಯ ಅಧ್ಯಕ್ಷನಾದ ನಾನು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ 2006-07 ನೇ ಸಾಲಿನ ಅಂದಾಜುಗಳ ಸಮಿತಿಯ ನಾಲ್ಕನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :-

ವಿಷಯ :- ಕಾವೇರಿ ನದಿ ನೀರು ವಿವಾದ ಕುರಿತು :

ಶ್ರೀ ವಾಟಾಳ್ ನಾಗರಾಜ್ :- ಸನ್ಮಾನ್ಯ ಅಧ್ಯಕ್ಷರೇ, ಬಹಳ ಪ್ರಮುಖವಾಗಿ ಜಲಸಂಪನ್ಮೂಲ ಸಚಿವರು ಸದನದಲ್ಲಿ ಇದ್ದಾರೆ. ಬಹಳ ಅತ್ಯಂತ ಗಂಭೀರವಾಗಿ ಈ ರಾಜ್ಯದಲ್ಲಿ ಕಾವೇರಿಯ ಬಗ್ಗೆ ದೊಡ್ಡ ದೊಡ್ಡ ಹೋರಾಟಗಳು ನಡೆಯಿತು. ಅಂತಿಮವಾಗಿ ಅದರ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುತ್ತೇವೆಂದು ಹೇಳಿದರು, ಅದಾದ ನಂತರ ನ್ಯಾಯಮಂಡಳಿಯ ಮುಂದೆ ನಮ್ಮ ಅರ್ಜಿಯನ್ನು ಸಲ್ಲಿಸುತ್ತೇವೆಂದು ಹೇಳಿದರು. ಅದಾದ ನಂತರ ಸರ್ವಪಕ್ಷಗಳ ನಿಯೋಗವನ್ನು

ಕರೆದುಕೊಂಡು ಹೋಗುತ್ತೇವೆಂದು ಹೇಳಿ ಈ ಸಭೆಯಲ್ಲಿ ಹೇಳಿದ್ದರು. ಆದರೆ ಈವರೆಗೆ ಪರಿಸ್ಥಿತಿ ಏನಾಗಿದೆ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ. ಏನೋ ಜಲಾಶಯದಲ್ಲಿ ನೀರು ತುಂಬಿ ಹರಿದು ಹೋಗುತ್ತಿದೆ, ಯಾವ ರೀತಿ ಹೋಯಿತು, ಹೇಗೆ ಹೋಯಿತು ಎಂಬುದು ಗೊತ್ತಿಲ್ಲ, ಮತ್ತೊಂದು ಕಡೆ ನಮಗೆ ನೀರು ಬಿಟ್ಟಿಲ್ಲವೆಂದು ಹೇಳಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಮಾನ್ಯ ಕರುಣಾನಿಧಿಯವರು ಪ್ರಧಾನ ಮಂತ್ರಿಯವರಿಗೆ ಒಂದು ಕಡೆ ಪತ್ರ ಬರೆಯುತ್ತಾರೆ, ಮತ್ತೊಂದು ಕಡೆ ಇದು ಬಹಳ ಸಮಂಜಸವಾಗಿ ಎರಡೂ ರಾಜ್ಯಗಳು ಹೊಂದಾಣಿಕೆ ಮಾಡಿಕೊಂಡು ಹೋಗಬೇಕೆಂಬ ಮಾತನ್ನು ಅವರು ಹೇಳುತ್ತಾರೆ. ಇದರ ಬಗ್ಗೆ ಪರಿಸ್ಥಿತಿ ಏನಾಗಿದೆ? ಕರ್ನಾಟಕ ರಾಜ್ಯದವರು ಕಗ್ಗತ್ತಲೆಯಲ್ಲಿದ್ದೇವೆ. ಈ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರು ಹೇಳಬೇಕು. ಈಗಿನ ಪರಿಸ್ಥಿತಿ ಏನು? ನ್ಯಾಯಮಂಡಳಿಯಲ್ಲಿ ಯಾವ ರೀತಿ ನಡೆದಿದೆ? ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವ ರೀತಿ ನಡೆದಿದೆ? ನಮ್ಮ ವಕೀಲರುಗಳನ್ನು ಯಾರ್ಯಾರು ನೇಮಿಸಿದ್ದೀರಿ? ಅಲ್ಲಿ ಯಾರು ವಾದ ಮಾಡುತ್ತಾರೆಂಬುದನ್ನು ಹೇಳಬೇಕು. ಮತ್ತು ಇದೇ ಸದನದಲ್ಲಿ ಮಾನ್ಯ ಜಲಸಂಪನ್ಮೂಲ ಸಚಿವರು ಕಬಿನಿ ಎರಡನೇ ಹಂತವನ್ನು ಪ್ರಾರಂಭ ಮಾಡುತ್ತೇವೆ. ಅದಕ್ಕೆ ನ್ಯಾಯಮಂಡಳಿ ತೀರ್ಪು ಸಂಬಂಧವಿಲ್ಲ...

ಓಲೇಕಾರ್ ನೇಹರು ಚನ್ನಬಸಪ್ಪ :– ಮಾನ್ಯ ಅಧ್ಯಕ್ಷರೇ, ದಯಮಾಡಿ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು :– ಆಯಿತು, ಇನ್ನೂ ಅಜೆಂಡಾದಲ್ಲಿ ನಿಮ್ಮ ವಿಷಯ ಬಂದಿಲ್ಲ. ಕುಳಿತುಕೊಳ್ಳಿ. ಇದು ಶೂನ್ಯವೇಳೆ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ :– ದಯವಿಟ್ಟು ಅಜೆಂಡಾದಲ್ಲಿರುವುದನ್ನು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ. ನಂತರ ಅವರಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಆಯಿತು, ನೀವು ಕುಳಿತುಕೊಳ್ಳಿ. ಗಮನ ಸೆಳೆಯುವ ಸೂಚನೆ ಬಂದಾಗ ತಮಗೆ ಅವಕಾಶವನ್ನು ಕೊಡುತ್ತೇನೆ. ಶೂನ್ಯ ವೇಳೆಯನ್ನು ಪ್ರಸ್ತಾಪ ಮಾಡುತ್ತಿದ್ದಾರೆ, ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಇದೇ ಸದನದಲ್ಲಿ ಜಲಸಂಪನ್ಮೂಲ ಸಚಿವರು ಹೇಳಿದರು, ಕಬಿನಿ ಎರಡನೇ ಹಂತ ಕಾಮಗಾರಿಗೂ ನ್ಯಾಯಮಂಡಳಿಯ ತೀರ್ಪಿಗೂ

ಸಂಬಂಧವಿಲ್ಲ. ನಾನು ಆರಂಭ ಮಾಡುತ್ತೇವೆಂದು ಹೇಳಿ ಹೆಚ್ಚು ಕಡಿಮೆ ನಾಲ್ಕೂವರೆ ತಿಂಗಳು ಆಯಿತು, ಹೋದ ಶಾಸನಸಭೆಯಲ್ಲಿ ಹೇಳಿದರು, ಇದಲ್ಲದೇ ಹೊರಗಡೆ ಬಹಿರಂಗವಾಗಿ ಹೇಳಿದರು ಇವತ್ತಿನವರೆಗೆ ಕಬಿನಿ ಎರಡನೇ ಹಂತ ಕಾಮಗಾರಿ ಆರಂಭ ಮಾಡುವ ಬಗ್ಗೆ ಯಾವುದೇ ಒಂದು ಯಾವುದೇ ಒಂದು ಸೂಚನೆ ಇಲ್ಲ. ನಮ್ಮ ಜನ ಈ ರಾಜ್ಯದ ಜನತೆ ಇವತ್ತು ಯಾವ ರೀತಿ ಇದರ ಬಗ್ಗೆ ಮುನ್ನುಗ್ಗಿದ್ದೇವೆ, ಸರ್ಕಾರ ಯಾವ ರೀತಿ ಈ ಬಗ್ಗೆ ತಮ್ಮ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಏನು ಮಾಡುತ್ತಾರೆ ಎಂಬ ಬಗ್ಗೆ ಏನೂ ಗೊತ್ತಿಲ್ಲ. ದಯಮಾಡಿ ತಾವು ಯಾವ ರೀತಿ ಯೋಚಿಸಿದ್ದೀರಿ? ಕಾವೇರಿ ನ್ಯಾಯಮಂಡಳಿಯಲ್ಲಿ ತಮ್ಮ ಅರ್ಜಿಯ ಬಗ್ಗೆ ಏನಾಯಿತು? ಅದರ ಬಗ್ಗೆ ಏನೂ ತೀರ್ಮಾನವಾಯಿತು? ಸರ್ವೋಚ್ಚ ನ್ಯಾಯಾಲಯದಲ್ಲಿ ಏನು ತೀರ್ಮಾನವಾಯಿತು? ಪ್ರಧಾನ ಮಂತ್ರಿಯವರನ್ನು ತಾವು ಭೇಟಿ ಮಾಡಿದ್ದೀರಾ? ಇವೆಲ್ಲದರ ಬಗ್ಗೆ ಸಮಗ್ರವಾಗಿ ರಾಜ್ಯದ ಜನತೆಗೆ ತಿಳಿಸಬೇಕಾಗಿದೆ. ದಯವಿಟ್ಟು ಈ ಬಗ್ಗೆ ತಾವು ಉತ್ತರ ಕೊಡಬೇಕೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಜಲಸಂಪನ್ಮೂಲ ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀಯುತ ವಾಟಾಳ್ ನಾಗರಾಜ್‌ರವರು ಕಾವೇರಿ ವಿಚಾರದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾನು ತುಂಬಾ ಸ್ಪಷ್ಟವಾಗಿ ಹೇಳಲಿಚ್ಛಿಸುತ್ತೇನೆ. ಈಗಾಗಲೇ ಏನು ತೀರ್ಪು ಬಂದಿದೆ. ಬಂದಿರುವಂಥ ತೀರ್ಪಿನ ಬಗ್ಗೆ ತಾವೆಲ್ಲರೂ ಕೂಡ ಏನು ಸಲಹೆಯನ್ನು ಕೊಟ್ಟಿದ್ದಿರಿ, ಈಗಾಗಲೇ ನಾವು ಸರ್ವಪಕ್ಷದ ಸಭೆಯನ್ನು ಮಾಡಿ ಅಲ್ಲಿ ಬಂದಂಥ ಸಲಹೆ ಪ್ರಕಾರ ಈಗಾಗಲೇ ರಾಜ್ಯಸರ್ಕಾರ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಅಲ್ಲಿ ನಮ್ಮ ಅರ್ಜಿಯೇ ಅಡ್ಮಿಟ್ ಆಗಬಾರದೆನ್ನುವ ಪ್ರಯತ್ನವನ್ನೂ ಕೂಡ ತಮಿಳುನಾಡಿನ ಸರ್ಕಾರ ಮಾಡಿದ್ದು ಹೌದು. ಆದರೂ ಕೂಡ ನಮ್ಮ ಅರ್ಜಿ ಅಡ್ಮಿಟ್ ಆಗಿದೆ ಇದು ನಮಗೆ ಮೊದಲನೇ ಜಯ ಎಂಬ ವಿಷಯವನ್ನು ಬಹಳ ಸಂತೋಷದಿಂದ ಹೇಳುತ್ತೇನೆ. ಈ ಕೇಸು ನಡೆಯುತ್ತಿರುವ ಈ ಸಂದರ್ಭದಲ್ಲಿಯೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿದ್ದರೆನ್ನುವ ವಿಷಯ ಪತ್ರಿಕೆಗಳಲ್ಲಿಯೂ ಕೂಡ ಬಂದಿತ್ತು. ಆದರೆ ಅಲ್ಲಿಯ ತಮಿಳುನಾಡಿನ ಶ್ರೀಮತಿ ಜಯಲಲಿತಾ ಮತ್ತು ಕರುಣಾನಿಧಿಯರ ರಾಜಕಾರಣದಿಂದ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ಗಮನವೇ ಕೊಟ್ಟಿಲ್ಲ. ಮಾತೇ ಆಡಿಲ್ಲವೆನ್ನುವುದನ್ನು ಆ ಸಂದರ್ಭದಲ್ಲಿ ಹೇಳಿದರು. ಈಗ

ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿರುವ ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರು ಪ್ರಧಾನಮಂತ್ರಿಯವರ ಬಳಿ ಹೋಗಿದ್ದೇವೆಂಬ ಮಾತನ್ನು ಹೇಳುತ್ತಿದ್ದಾರೆ. ಅದೇ ರೀತಿ ತಮಿಳುನಾಡಿನ ಮುಖ್ಯಮಂತ್ರಿಯವರೂ ಕೂಡ ನಮಗೆ ನೀವು ನೀರು ಬಿಟ್ಟಿಲ್ಲ, ನೀವು ನೀರನ್ನು ನಮ್ಮ ರಾಜ್ಯಕ್ಕೆ ಬಿಡಬೇಕು ಎಂಬುದಾಗಿ ಸಹ ನನಗೆ ಪತ್ರವನ್ನು ಬರೆದಿದ್ದಾರೆ. ಈ ಪತ್ರವನ್ನು ಏತಕ್ಕೆ ಬರೆದಿದ್ದಾರೆಂದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ವಿವಾದಗಳು ಆರಂಭವಾಗುತ್ತಿರುವ ಸಮಯದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ಭಾವನೆ ತರುವ ದೃಷ್ಟಿಯಿಂದ, ಕರ್ನಾಟಕದಿಂದ ನೀರೇ ಬಿಟ್ಟಿಲ್ಲವೆಂಬ ಅಭಿಪ್ರಾಯವನ್ನು ತರುವ ದೃಷ್ಟಿಯಿಂದ ಕರುಣಾನಿಧಿಯವರು ಮತ್ತು ಅಲ್ಲಿಯ ಮಂತ್ರಿಯವರು ಮಾಡಿದಂಥ ಒಂದು ಆಟ ಇದು. ಆದರೂ ಕೂಡ ನಾನು ಈ ಬಗ್ಗೆ ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ನಾವು ಯಾವುದೇ ಕಾರಣಕ್ಕೂ ಕೂಡ ರಾಜ್ಯದ ರೈತರ ಹಿತವನ್ನು ಬಲಿ ಕೊಟ್ಟು, ನೀರು ಬಿಡುವ ಪ್ರಶ್ನೆಯೇ ಇಲ್ಲ. ನಾವು ನಮ್ಮ ರಾಜ್ಯದ ಹಿತ ಕಾಪಾಡುವುದು ಒಂದು ಪ್ರಮುಖವಾದ ಅಂಶವಾಗಿದೆ. ಇವತ್ತೇನಾಗಿದೆ, ಸುಪ್ರೀಂಕೋರ್ಟಿನಲ್ಲಿ ವಾದ ವಿವಾದಗಳು ನಡೆಯುತ್ತಿರುವ ಸಂದರ್ಭದಲ್ಲಿ ನೀರು ಬಿಟ್ಟಿಲ್ಲ, ನೀರು ಬಿಟ್ಟಿಲ್ಲ ಎಂಬ ಕೂಗನ್ನು ಕೂಗಿ ತಮಿಳುನಾಡಿನವರು ಕರ್ನಾಟಕದ ರಾಜ್ಯದವರ ಮೇಲೆ ಒಂದು ಆಪಾದನೆಯನ್ನು ಹೊರಿಸುವ ಪ್ರಯತ್ನ ಮಾಡಿದರು. ನಿಜ, ಮಳೆ ಬಾರದೆ ಜೂನ್ ತಿಂಗಳಿನಲ್ಲಿ ಸಾಕಷ್ಟು ನೀರು ಬಂದಿರಲಿಲ್ಲ. ನಾವು ನೀರನ್ನು ಬಿಡಲಿಕ್ಕೆ ಸಾಧ್ಯವಾಗಿಲ್ಲ. ನಮ್ಮಲ್ಲೇ ನೀರು ಇಲ್ಲವೆಂದಾಗ ಅವರಿಗೆ ನೀರು ಬಿಡಲಿಕ್ಕೆ ಸಾಧ್ಯವಾಗಿಲ್ಲ. ಆದರೆ ಈಗ ಸಾಕಷ್ಟು ನೀರು ಬಂದಿದೆ, ಕೆ.ಆರ್.ಎಸ್., ಕಬಿನಿ ಡ್ಯಾಮ್ ಎರಡೂ ತುಂಬಿವೆ, ಹಾಗಾಗಿ ಈಗ ನೀರು ತುಂಬಿರುವಂಥ ಸಂದರ್ಭದಲ್ಲಿ ನಾವು ಯಾವ ರೀತಿ 15 ವರ್ಷಗಳಲ್ಲಿ 205 ಟಿ.ಎಂ.ಸಿ ನೀರು ಮಧ್ಯಂತರ ತೀರ್ಪಿನಲ್ಲಿ ಕೊಟ್ಟಿರುವ ಅಂಶದಂತೆ 11 ವರ್ಷಗಳು ನೀರು ಬಿಟ್ಟಿದ್ದೆವೋ ಹಾಗೆ ನೀರು ಬಿಡುವ ಸಂದರ್ಭದಲ್ಲಿಯೂ ಕೂಡ ನಮ್ಮ ರೈತರಿಗೆ ತೊಂದರೆ ಕೊಡದಂತೆ ನೀರು ಬಿಟ್ಟಿದ್ದೇವೆ. ಅದೇ ರೀತಿ ಎರಡೂ ಡ್ಯಾಮ್‌ಗಳಲ್ಲಿ ಸಾಕಷ್ಟು ನೀರು ಇರುವಂಥ ಸಂದರ್ಭದಲ್ಲಿ ವಿಶೇಷವಾಗಿ ಕಬಿನಿ ನದಿಯಲ್ಲಿ ನೀರು ತುಂಬಿ ಹರಿದು ಹೋಗುತ್ತಿದೆ. 30,000 ಕ್ಯೂಸೆಕ್ಸ್ inflow ಇತ್ತು. Outflow ಕೂಡ ಅಷ್ಟೇ ಕಳುಹಿಸುತ್ತಿದ್ದೇವೆ. ಅದೇ ರೀತಿ ಕೆ.ಆರ್.ಎಸ್. ಮತ್ತು ಕಬಿನಿ ಎರಡೂ ಡ್ಯಾಮ್‌ಗಳು ತುಂಬಿರುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ರೈತರಿಗೆ ತೊಂದರೆ ಆಗದಿರುವ ರೀತಿಯಲ್ಲಿ

ನಾವು ನೀರು ಬಿಡುತ್ತಿರುವುದು ಹೌದು. ಈ ಮಧ್ಯೆ ಯಾವ ಒಂದು ವಿಚಾರವನ್ನು ಇಟ್ಟುಕೊಂಡು ಒಂದು ಹೋರಾಟವನ್ನು ನಾರೀಮನ್‌ರವರ ನೇತೃತ್ವದಲ್ಲಿ ಒಂದು ಪ್ರಯತ್ನ ನಡೆಸಿದರು, ಅದೇ ಅಂಶವನ್ನು ಟ್ರಿಬ್ಯುನಲ್‌ನಲ್ಲಿ ನಮಗೆ ಅನ್ಯಾಯವಾಗಿದೆ ಎಂಬ ಅಂಶ ಯಾವ ರೀತಿ ಕೇರಳಕ್ಕೆ ಹೋಗುವ ನೀರು, constructions ಆಗುವವರೆಗೆ ಆ ನೀರನ್ನು ತಮಿಳುನಾಡಿಗೆ ಬಿಡುವಂಥ ಅಂಶ. ಅಂತರ್ಜಲ ತಮಿಳುನಾಡಿಗೆ ಕರ್ನಾಟಕದ್ದು ಗಮನಿಸುತ್ತಿರುವ ಅಂಶ. ಬೆಂಗಳೂರಿನ ಕುಡಿಯುವ ನೀರಿನ ಅಂಶ. ಈ ಎಲ್ಲಾ ಅಂಶಗಳ ಬಗ್ಗೆ ವಾದ ಮಾಡಿದ್ದರೂ ಕೂಡ ಟ್ರಿಬ್ಯುನಲ್‌ನಲ್ಲಿ ನಮಗೆ ನ್ಯಾಯ ಸಿಗದೇ ಇರುವಂಥ ಸಂದರ್ಭದಲ್ಲಿ ಇದೇ ಒಂದು ನಾರಿಮನ್‌ರವರ ನೇತೃತ್ವದಲ್ಲಿ ನಮ್ಮ ವಕೀಲರು ಸುಪ್ರೀಂಕೋರ್ಟ್‌ನ ಮುಂದೆ ವಾದವನ್ನು ಮಾಡುತ್ತಿದ್ದಾರೆ. ಹಾಗೆಯೇ ಕಬಿನಿ ಎರಡನೇ ಕಾಮಗಾರಿ ಹಂತದ ಬಗ್ಗೆ ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡುತ್ತಿದ್ದಾರೆ. ಈಗಾಗಲೇ ಇದರ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಈ ಸರ್ಕಾರಕ್ಕೆ ಕಬಿನಿಯ ಎರಡನೆ ಹಂತದ ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆ ಇದೆ. ಆ ದಿಕ್ಕಿನಲ್ಲಿ ಆದಷ್ಟು ಬೇಗ ನಮ್ಮ ಅಧಿಕಾರಿಗಳ ಜೊತೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಆ ಒಂದು ಕಾಮಗಾರಿಯನ್ನು ಕೂಡ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಆ) ವಿಷಯ :– <u>ಚಾಮರಾಜನಗರ ತಾಲ್ಲೂಕು ಕೊತ್ತಲವಾಡು ಗಣಿಯಲ್ಲಿ ಸಂಭವಿಸಿದ ಸ್ಫೋಟದ ಕುರಿತು :–</u>

ಶ್ರೀ ಆರ್. ಧ್ರುವನಾರಾಯಣ್ (ಸಂತೇಮಾರಹಳ್ಳಿ) :– ನಮ್ಮ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಕೊತ್ತಲವಾಡು ಗ್ರಾಮದಲ್ಲಿ ನಿನ್ನೆ ಗಣಿ ಸ್ಫೋಟವಾಗಿ ಆರು ಮಂದಿ ಕೂಲಿಕಾರರು ಮೃತಪಟ್ಟಿದ್ದಾರೆ, ಅದರಲ್ಲಿ ಮೂರು ಜನ ನನ್ನ ಮತಕ್ಷೇತ್ರಕ್ಕೆ ಸೇರಿದ್ದಾರೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವಂಥಾದ್ದು, ಮೃತರಾಗಿರುವ ಆರು ಜನ ಕೂಲಿಕಾರರ ಕುಟುಂಬದ ಸಂಕಷ್ಟಕ್ಕೆ ಸರ್ಕಾರ ಧಾವಿಸಬೇಕು. ಕೂಲಿಕಾರರ ಕುಟುಂಬವರ್ಗದವರು ಕಂಗಾಲಾಗಿದ್ದಾರೆ. ಅವರಿಗೆ ಮೊದಲು ಪರಿಹಾರವನ್ನು ಒದಗಿಸಿಕೊಡುವುದನ್ನು ಸರ್ಕಾರ ಮಾಡಬೇಕಂಬ ಮನವಿಯನ್ನು ತಮ್ಮ ಮೂಲಕ ನಾನು ಮಾಡಿಕೊಳ್ಳುತ್ತೇನೆ. ಜೊತೆಗೆ ಈ ಗಣಿಗಾರಿಕೆ ಬಹಳ ಕಡೆಗಳಲ್ಲಿ ಅಕ್ರಮವಾಗಿ ನಡೆಯುತ್ತಿದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಮತ್ತು